OS 9/2020 PW.1

ಅಸಲು ದಾವೆ ಸಂಖ್ಯೆ - 9/2020
ಪಿಡಬ್ಲ್ಯೂ - 01
ದಿನಾಂಕಃ 24-08-2024
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ವಿ.ಬಿ.ಟಿ ವಕೀಲರಿಂದ</u>**

ಮೂಲ ಪುರುಷ ಗುಡ್ಡಪ್ಪ ಬಿನ್ ನಿಂಗಪ್ಪ ಮುಡ್ಡಿರವರು ಯಾವಾಗ ಮರಣ ಹೊಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮೂಲ ಪುರುಷ ಗುಡ್ಡಪ್ಪರವರು ತೀರಿಕೊಂಡು

ಸುಮಾರು 30 ವರ್ಷದ ಮೇಲೆ ಆಗಿರುತ್ತದೆ. ಮೂಲ ಪುರುಷ ಗುಡ್ಡಪ್ಪರವರ ಹೆಸರಿನಲ್ಲಿ ಎಷ್ಟು ಆಸ್ತಿಗಳು ಇತ್ತು ಮತ್ತು ಅದರ ನಂಬರಗಳನ್ನು ಹೇಳಲು ನಿಮಗೆ ಆಗುತ್ತದೆಯಾ ಎಂದರೆ ನೆನಪಿರುವುದಿಲ್ಲ, ಆದರೆ ಅವರ ಹೆಸರಿನಲ್ಲಿ ಸುಮಾರು ಆಸ್ತಿಗಳು ಇದ್ದವು. ದಾವಾ ಆಸ್ತಿಗಳು ನಮ್ಮ ತಂದೆಯವರ ಹೆಸರಿನಲ್ಲಿರುತ್ತದೆ. ದಾವಾ ಆಸ್ತಿಯಾದ ವಿಪಿಸಿ ನಂಬರ 154 ಗಾಂವಠಾಣಾ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿ ವಿಪಿಸಿ ನಂಬರ 154 ನಿಮ್ಮ ತಂದೆಯ ಹೆಸರಿಗೆ ಹೇಗೆ ಬಂದಿತು ಎಂದರೆ ನಮ್ಮ ತಂದೆಯವರು ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿಯನ್ನು ಯಾವ ವರ್ಷದಂದು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಮತ್ತು ಅದರ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ದಾವಾ ಆಸ್ತಿಗಳು ಮೂಲ ಪುರುಷ ಗುಡ್ಡಪ್ಪನವರಿಗೆ ಅವರ ತಂದೆಯಿಂದ ಬಂದ ಆಸ್ತಿ ಎಂದು ತೋರಿಸಲು ಯಾವುದಾದರು ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯ ಕಿಮ್ಮತ್ತು ಎಷ್ಟು ಇದೆ ಎಂದು ಹೇಳಲು ಆಗುತ್ತದೆಯಾ ಎಂದರೆ ಆಗುವುದಿಲ್ಲ. ದಾವಾ ಆಸ್ತಿಯ ಎಷ್ಟು ಕಿಮ್ಮತ್ತು ಆಗುತ್ತದೆ ಎಂದು ನಾನು ದಾವೆಯಲ್ಲಿ ಬರೆಸಿರುವುದಿಲ್ಲ. ಶೆಡ್ಯೂಲ್ ಎ ನಲ್ಲಿ ಕಾಣಿಸಿದ ದಾವಾ ಆಸ್ತಿಗಳು ಸುಮಾರು 5 ಎಕರೆ ಮೇಲ್ಪಟ್ಟು ಆಗುತ್ತದೆ ಎಂದರೆ ಸರಿ. ಸದರಿ 5 ಎಕರೆ ಜಮೀನು ಕೆಂಪು ನೆಲ (ಮಸರಿ ಜಮೀನು). ಸದರಿ ದಾವಾ ಆಸ್ತಿಯು ಎಕರೆಗೆ 10 ಲಕ್ಷದಂತೆ 5 ಎಕರೆಗೆ 50 ಲಕ್ಷ ಆಗುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಶೆಡ್ಯೂಲ ಬಿ ನಲ್ಲಿ ತೋರಿಸಿದ ಆಸ್ತಿಗಳ ಅಂದಾಜು ಮೌಲ್ಯ ಸುಮಾರು ರೂ.40,00,000/-ಗಳು ಆಗುತ್ತದೆ ಎಂದರೆ ಆಗಬಹುದು, ನನಗೆ ಗೊತ್ತಿಲ್ಲ.

ಶೆಡ್ಯೂಲ್ ಬಿ ನಲ್ಲಿ ತೋರಿಸಿದ ವಿಪಿಸಿ ನಂಬರ 14/1, 14/2, 14/3 ರ ಚೆಕ್ಕುಬಂದಿ ಒಂದೇ ಇರುತ್ತದೆಯೋ ಅಥವಾ ಬೇರೆ ಬೇರೆ ಇರುತ್ತದೆಯೋ ಎಂದರೆ ಮೂರು ಆಸ್ತಿಗಳಿಗೂ ಒಂದೇ ಚೆಕ್ಕುಬಂದಿ ಇರುತ್ತದೆ. ಸದರಿ ಆಸ್ತಿಯ ಚೆಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ಶೆಡ್ಯೂಲ ಬಿ ನಲ್ಲಿ ತೋರಿಸಿದ ವಿಪಿಸಿ ನಂಬರ 14/1, 14/2, 14/3, 154 ರ ಅಳತೆ/ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಹೇಳಲು ಆಗುವುದಿಲ್ಲ.

ದಾವಾ ಎ ಶೆಡ್ಯೂಲ ಆಸ್ತಿಗಳಲ್ಲಿ ನಿಮ್ಮ ಅಣ್ಣ ತಮ್ಮಂದಿರ ಹೆಸರುಗಳು ನಮೂದಾಗಿರುತ್ತದೆ, ಆ ಹೆಸರುಗಳು ಯಾವಾಗ ನಮೂದಾಯಿತು ಎಂದು ನಿಮಗೆ ಹೇಳಲು ಆಗುತ್ತದೆಯಾ ಎಂದರೆ ಆಗುವುದಿಲ್ಲ. ದಾವಾ ಆಸ್ತಿಗಳಲ್ಲಿ ನಿಮ್ಮ ಹೆಸರು ದಾಖಲಾಗಿಲ್ಲ ಎಂದರೆ

ಸರಿ. ವಿಪಿಸಿ ನಂಬರ 154 ಅನ್ನು ನಿಮ್ಮ ತಮ್ಮನ ಹೆಂಡತಿ ಲಲಿತವ್ವರವರು ಖರೀದಿ ಮಾಡಿರುತ್ತಾರೆ ಎಂದರೆ ನಮಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿರುತ್ತಾರೆ. ನಿಮ್ಮ ತಂದೆಯಾದ ಗುಡ್ಡಪ್ಪನವರು ತೀರಿಕೊಂಡ ಬಳಿಕ ವಾರಸಾ ಪ್ರಕಾರ ದಾವಾ ಆಸ್ತಿಗಳಲ್ಲಿ ನಿಮ್ಮ ಹೆಸರು ನಮೂದಾಗಿಲ್ಲ ಎಂದರೆ ನಮ್ಮ ಅಣ್ಣ ತಮ್ಮಂದಿರು ನಮ್ಮ ಹೆಸರನ್ನು ನಮೂದಿಸಿರುವುದಿಲ್ಲ ಮತ್ತು ನಮ್ಮ ಹೆಸರನ್ನು ಬಿಟ್ಟಿರುತ್ತಾರೆ. ದಾವಾ ಶೆಡ್ಯೂಲ ಎ ಆಸ್ತಿಗಳಲ್ಲಿ ಪ್ರತಿವಾದಿ ನಂಬರ 1 ರಿಂದ 3 ರವರು ಕಬ್ಜಾದಲ್ಲಿ ಇದ್ದಾರೆ ಎಂದರೆ ಸರಿ. ದಾವಾ ಶೆಡ್ಯೂಲ ಬಿ ಆಸ್ತಿಗಳಲ್ಲಿ ಪ್ರತಿವಾದಿ ನಂಬರ 1 ರಿಂದ 3 ರವರೆ ಕಬ್ಜಾದಲ್ಲಿ ಇದ್ದಾರೆ ಎಂದರೆ ಸರಿ. ನೀವು ಯಾವಾಗ ದಾವಾ ಆಸ್ತಿಗಳಲ್ಲಿ ಪಾಲು ಬೇಕು ಎಂದು ಕೇಳಿದ್ದೀರಿ ಎಂದರೆ ಸುಮಾರು 5 ವರ್ಷದ ಹಿಂದೆ ಕೇಳಿರುತ್ತೇನೆ, ಅವರು ನೀವು ನ್ಯಾಯಾಲಯಕ್ಕೆ ಹೋಗಿ ನಿಮ್ಮ ಆಸ್ತಿ ಪಡೆದುಕೊಳ್ಳಿ ಎಂದು ಹೇಳಿರುತ್ತಾರೆ. ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹಾಗೂ ದಾವೆಯಲ್ಲಿ ಏನು ಬರೆದಿದ್ದಾರೆ ಎಂದು ನಿಮ್ಮ ಸ್ವಂತಕ್ಕೆ ಮಾಹಿತಿ ಇಲ್ಲ ಎಂದರೆ ಸರಿ.

ವಿಪಿಸಿ ನಂಬರ 154 ಲಲಿತವ್ವರವರ ಗಂಡನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಪ್ರತಿವಾದಿಯರ ಸ್ವಯಾರ್ಜಿತ ಆಸ್ತಿಯನ್ನು ದಾವೆಗೆ ಸೇರಿಸಿ ಅವರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.